ಹರಿಹರನು ನಿರೂಪಿಸುವಂತೆ ಬನವಾಸಿ ದೇವಾಲಯದ ಅಂಗಳದಲ್ಲಿ ಜರುಗಿಹೋದ ಅಲ್ಲಮ–ಕಾಮಲತೆಯರ ಮದ್ದಳೆ–ನೃತ್ಯ ಸಾಂಗತ್ಯ ಮತ್ತು ಪ್ರೇಮಸಂಗತಿ ಅವರೀರ್ವರ ಅಂತರಂಗದಲ್ಲಿ ಬೇರೂರಿ, ಮುಂದಿನ ಅನಿವಾರ್ಯ ಅಗಲಿಕೆಯ ದುರಂತದಲ್ಲಿ ಬೇರೊಂದು ದಿಕ್ಕನ್ನು ಹಿಡಿದ ಕ್ರಮವನ್ನು ಅಲ್ಲಮನ ಮೇಲೆ ಹುಟ್ಟಿಕೊಂಡ ಎಲ್ಲ ಕೃತಿಗಳೂ ಪರಿಪರಿಯ ಉಪಕ್ರಮದಲ್ಲಿ ನಿರೂಪಿಸುತ್ತವೆ. ಹರಿಹರನ ರಗಳೆಯ ಅಲ್ಲಮನ ಕಥಾನಕವನ್ನು ಡಾ. ಎಲ್. ಬಸವರಾಜು ಅವರು ತಮ್ಮ 'ಪ್ರಭುದೇವರ ಷಟ್‌ಸ್ಥಲದ ವಚನಗಳು' ಗ್ರಂಥದಲ್ಲಿ ಸೂಕ್ತವಾಗಿಯೇ ವ್ಯಾವರ್ತಿನಿ, ಅಂತರ್ವರ್ತಿನಿ, ಸಂವರ್ತಿನಿ ಎಂಬ ಹಂತಗಳಲ್ಲಿ ಗುರುತಿಸುತ್ತಾರೆ. ಆದರೆ, ಹರಿಹರನ ರಗಳೆಯ ಕಥಾನಕದ ನಂತರ ಬಂದ ಎಲ್ಲ ಕೃತಿಗಳೂ ಅಲ್ಲಮನು ಸಂವರ್ತಿನಿ ಹಂತವನ್ನು ದಾಟಿದ ನಂತರದ್ದೇ ಲೀಲೆಯಾಗಿ ಹೇಳುತ್ತವೆ. ಈಗಾಗಲೇ ಗಮನಿಸಿರುವಂತೆ ಯಾವುದೋ ಮೂಲದ ಒಂದು ನಿಜ ಜೀವನ ಘಟನೆಯಾದರೂ ಸರಿ, ಪುರಾಣಾಂತರ್ಗತ ಕಥನವಾದರೂ ಸರಿಯೇ ಅವು ಪ್ರತಿ ಧರ್ಮದ ಹಿನ್ನೆಲೆಯ ಕವಿಯ ಕೈಗೆ ಸಿಕ್ಕಿ ಪಡೆದುಕೊಳ್ಳುವ ರೂಪಾಂತರ ಕುತೂಹಲ ಹುಟ್ಟಿಸುತ್ತವೆ. ಅದೇ ಭಾರತೀಯ ಅಥವಾ ಪ್ರಾಂತೀಯ ಸಾಹಿತ್ಯ ಪರಂಪರೆಯ ವಿಚಿತ್ರ, ಸುಂದರ, ವೈವಿಧ್ಯತೆ. ಇಲ್ಲೇ ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ ಬಸವಾದಿ ಅಲ್ಲಮ ಪ್ರಮಥರ ನಂತರ ಬಂದ ಭೀಮಕವಿ ತನ್ನ ಬಸವ ಪುರಾಣದಲ್ಲಿ ತಂದಿರುವ ಹನುಮಂತನ ಕಥೆ. ಈ ಪುಟ್ಟ ರಾಮಾಯಣದ ನಾಯಕ ಹನುಮಂತನೇ, ರಾಮನಲ್ಲ!

ಅಲ್ಲಮ ಮತ್ತು ಕಾಮಲತೆಯರ ಸಹಜ ಪ್ರೇಮಸಂಗತಿ ಕಾಲಾನಂತರ ಅಂದರೆ ಇನ್ನೂರು ಮುನ್ನೂರು ವರ್ಷಗಳಲ್ಲಿ; ಅಲ್ಲಮನು ಸಂಪೂರ್ಣ ವ್ಯೋಮರೂಪನಾಗಿ ಪರಿವರ್ತಿತನಾದಲ್ಲಿ ಆತ ಎಲ್ಲವನ್ನೂ ಆ ಎತ್ತರದಿಂದಲೇ ನೋಡುವಂತಾಗಿ ಕಾಮಲತೆಯ ಸೌಂದರ್ಯವೂ ಅವನಿಗೆ ಕಾಣದಂತಾಗಿಬಿಡುತ್ತದೆ. ಚಾಮರಸ ಇನ್ನಿಲ್ಲದಂತೆ ವರ್ಣಿಸುವ ಕಾಮಲತೆಯ ಅಸಾಧಾರಣ ಸೌಂದರ್ಯ ಮತ್ತು ಕೈಲಾಸದ ಪಾರ್ವತಿಯ ಆಶಯ ಅಲ್ಲಮನ ಹುಟ್ಟು ಅರಿವಿನೆತ್ತರಕ್ಕೆ ನಿಲುಕದಂತಾಗಿಬಿಡುತ್ತದೆ. ಅದೇ ಎತ್ತರದಲ್ಲಿ ಚಾಮರಸನ ಅಲ್ಲಮ ಎಲ್ಲರನ್ನೂ ಉದ್ಧರಿಸುತ್ತ ನಡೆಯುತ್ತಾನೆ. ಇಷ್ಟಾದರೂ ಪ್ರಭುಲಿಂಗಲೀಲೆಯ ಆರಂಭದ ಒಂದು ಪದ್ಯವನ್ನು ಆಧುನಿಕ ಓದುಗ, ವ್ಯಾಖ್ಯಾನಕಾರರು ಮುಖ್ಯವಾಗಿ ಗಮನಿಸಬೇಕು. ಅದು ಹೀಗಿದೆ–

ಭೋಗ ಭೂಮಿಯ ಭೋಗ ತನುವಿನ
ಲಾಗದನುಪಮ ಸಿದ್ಧಿ ಕರ್ಮೋ
ದ್ಯೋಗ ಭೂಮಿಯ ಕರ್ಮ ತನುವಿನಲಲ್ಲದದಱಿಂದೆ ।
ಯೋಗ ಯೋಗ್ಯರು ಯೋಚಿಸುತ ಭೂ
ಭಾಗದಲಿ ಮಾನವ ಶರೀರಿಗ
ಳಾಗಿ ಸಾಧಿಸಿ ನಿಜವನಱಿವರು ಗಿರಿಜೆ ಕೇಳೆಂದ ॥

ಕೈಲಾಸದ ಶಿವನು ಪಾರ್ವತಿಗೆ ಹೇಳುವ ಈ ಮಾತು ದೇವಲೋಕಕ್ಕಿಂತ ಮರ್ತ್ಯಲೋಕದ ಜೀವನ ಪಾರಮ್ಯವನ್ನು ಎತ್ತಿ ಹಿಡಿಯುವಂತಿದೆ. ವಿರಳ, ವಿಶೇಷವೆನಿಸುವ ನಿತ್ಯ ಸುಖ ಮತ್ತು ಅದರಿಂದೊದಗುವ ಸಿದ್ಧಿಯು ಭೂಲೋಕದಲ್ಲಿ ಮಾನವ ಶರೀರಿಗಳಾಗಿ ಹುಟ್ಟಿದರೆ ಮಾತ್ರ; ದೇವಲೋಕ, ಸ್ವರ್ಗಲೋಕದ ಭೋಗಗಳಲ್ಲಿ ಮುಳುಗಿದವರಿಗೆ ಅದು ದೊರೆಯುವುದಿಲ್ಲ. ಭೂಭಾಗದಲ್ಲಿ ಜನಿಸಿ ಅದರ ಅನುಭವದೊಳಗೆ ದೇಹ ಸವೆಸಿದವರಿಗೆ ಸತ್ಯ ಸಿದ್ಧಿಯ ಸಾಧ್ಯತೆ, ದೈವ